
ಕತೆ

# ಗುಳಿಕ ಕಾಲದ ಅತಿಥಿ

**ಕೆ. ಅರವಿಂದ ಮಿತ್ರ**



ಶ್ರೀನಿವಾಸನು ಹೊಸ್ತಿಲು ದಾಟಿ ಕಾರು ಹತ್ತಬೇಕು ಅನ್ನುವಲ್ಲಿ, ಅಣ್ಣ ಗೋವಿಂದಾಚಾರ್ಯನು ಕಾಲಿನ ತೊಂದರೆಯಿಂದಲೋ ಏನೋ ಕುಂಟುತ್ತಲೇ ಮನೆಯ ಕಡೆ ಬರುವುದು ಕಂಡಿತು. ಹಾಗೆ ಒಳಬಂದ ಗೋವಿಂದನು, 'ನಮ್ಮ ಹಳ್ಳಿಯ ಮಣ್ಣಿನ ಮನೆಗಳೆಲ್ಲ ಉದುರಿ ಬೀಳುತ್ತಿರುವಂತೆ, ಈ ನಿಮ್ಮ ಬೆಂಗಳೂರಿನ ಬಿಲ್ಡಿಂಗುಗಳು ಆಕಾಶವನ್ನೇ ಅಲ್ಲಾಡಿಸುವಂತೆ ಏರುತ್ತಿವೆಯಲ್ಲಾ ಮಾರಾಯಾ. ಇದೇ ರಸ್ತೆಯಲ್ಲಿ ಮೂರು ಸಲ ಬಂದರೂ ನಿನ್ನ ಮನೆ ಪತ್ತೆ ಮಾಡುವುದು ಇಷ್ಟೊತ್ತಾಯ್ತು ನೋಡು,' ಎಂದು ಸೋಫಾದ ಮೇಲೆ ಕೂತು ಮನೆಯ ಒಳ ಆವರಣವನ್ನು ಕಣ್ತುಂಬಿಕೊಳ್ಳುತ್ತಾ ನಿಟ್ಟುಸಿರುಬಿಟ್ಟನು.

ಗೋವಿಂದಾಚಾರ್ಯ, ಶ್ರೀನಿವಾಸರು ಟಿ. ನರಸೀಪುರ ಫಾಸಲೆಯ ರಾಮಸಮುದ್ರದ ನರಸಿಂಹಯ್ಯನವರ ಇಬ್ಬರು ಮಕ್ಕಳು; ರಾಜಿ ಮಗಳು. ನರಸಿಂಹಯ್ಯನವರ ನಿತ್ಯ ಕಾಯಕವೆಂದರೆ ಆಂಜನೇಯನ ಗುಡಿಯ ಪೂಜಾರಿಕೆ. ಇದರೊಂದಿಗೆ ಪಂಚಾಂಗ ಹಿಡಿದು ರಾಶಿಫಲ, ಭವಿಷ್ಯವಿಚಾರ, ಮಳೆ, ಬೆಳೆ, ಗಾಳಿ ಕುರಿತು ಹೇಳುವುದು. ಕಾಯಿಲೆ ಬಿದ್ದ ಮಕ್ಕಳಿಗೆ ಮಂತ್ರ ಹಾಕಿ, ತೀರ್ಥ ಎರಚಿ ಯಂತ್ರ ಕಟ್ಟುವುದು. ನಾಲ್ಕು ಕಾಸು ಜಾಸ್ತಿ ಕೊಟ್ಟರೆ ನವಗ್ರಹಶಾಂತಿ, ಕುಜದೋಷ ಪರಿಹಾರ ಮಾಡುವುದು, ಲಗ್ನವಾಗುವ ಹೆಣ್ಣು ಗಂಡಿಗೆ ಮೂಹೂರ್ತ ಇಡುವುದಾಗಿತ್ತು. ಇದೀಗ ಗೋವಿಂದಾಚಾರ್ಯನು ಊರಲ್ಲೇ ಉಳಿದು ತಂದೆಯ ವಿದ್ಯೆ ಕಲಿತು ಅದನ್ನೇ ಮುಂದುವರೆಸುತ್ತಿದ್ದನು.

ಅರವತ್ತರ ಗೋವಿಂದನು, ಆಗಲೇ ತೊಂಬತ್ತು ದಾಟಿದವನಂತಾಗಿ ಮಂಡಿಯ ಚಿಪ್ಪು ಸವೆದು, ನೋವು ಎದ್ದು ವಾಲಾಡುತ್ತಲೇ ಮನೆಯ ಮೆಟ್ಟಿಲು ಹತ್ತಿದ್ದ. ಕೂತವನು, ಮಂಡಿ ಸವರಿಕೊಳ್ಳುತ್ತಾ 'ಶೀನಿ, ನನಗೇನೂ ಕಾಯಿಲೆ ಇಲ್ಲ. ನೀನು ಹೇಳುವ ಶುಗರ್, ಬಿ.ಪಿ, ಕೂಡ ಇಲ್ಲ. ಈಚೀಚೆಗೆ ಸ್ವಲ್ಪ ಮಂಡಿನೋವು ಹತ್ತಿಕೊಂಡಿದೆ. ಹೋದರೆ ಗುಡಿ, ಬಂದರೆ ಮನೆ ಇಷ್ಟಾಗಿದೆ. ಆದದ್ದು